ಆಡಳಿತ ಪರಿಣಿತಿ ತರಬೇತಿ

# ಸಹಕಾರ ಕ್ಷೇತ್ರದ ಯಶಸ್ಸು ಮನಸ್ಸು ಮತ್ತು ಹೃದಯದ (Byelaws - Business) ಮೇಲೆ ಅವಲಂಬಿತ – ಡಾ. ಆರ್.ಇಳಂಗೋವನ್



ಉದ್ಘಾಟನೆ



ಪ್ರತಿನಿಧಿಗಳು

**ಬೆಂಗಳೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ದಿನಾಂಕ : 22–06–2018 ರಿಂದ 23–06–2018ರವರೆಗೆ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ 2 ದಿನಗಳ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಡಾ. ಆರ್. ಇಳಂಗೋವನ್‌ರವರು ಉದ್ಘಾಟಿಸಿ, ಒಂದು ಸಹಕಾರ ಸಂಸ್ಥೆಯ ಅಭಿವೃದ್ಧಿ ಸದರಿ ಸಂಸ್ಥೆಯ ಮನಸ್ಸು ಹಾಗೂ ಹೃದಯಗಳ ಕಾರ್ಯನಿರ್ವಹಣೆಯ ಮೇಲೆ ಅವಲಂಬಿತವಾಗಿರುತ್ತದೆ. ಮನಸ್ಸು ಎಂದರೆ ಉಪವಿಧಿಗಳು, ಹೃದಯ ಎಂದರೆ ವ್ಯವಹಾರ ಇವುಗಳು ಆರೋಗ್ಯಕರವಾಗಿದ್ದರೆ ಸಂಸ್ಥೆ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯ ಎಂದು ತಿಳಿಸಿದರು. ಸಂಸ್ಥೆಯಲ್ಲಿ ನಾನು ಯಾರು, ನನ್ನ ಕರ್ತವ್ಯಗಳೇನು, ನನ್ನ ಪಾತ್ರ ಎಷ್ಟಕ್ಕೆ ಸೀಮಿತವಾಗಿ ನನ್ನ ಜವಾಬ್ದಾರಿಗಳೇನು ಎಂಬುದನ್ನು ನಿರ್ದೇಶಕರು ತಿಳಿದುಕೊಳ್ಳುವುದು ಅಗತ್ಯ ಎಂದು ತಿಳಿಸಿದರು.

## ಕನಿಷ್ಠ ವ್ಯವಹಾರ ಹಾಗೂ ಕನಿಷ್ಠ ಹಾಜರಾತಿ ಗೊಂದಲಕ್ಕೆ ಶೀಘ್ರದಲ್ಲಿ ಪರಿಹಾರಕ್ಕೆ ಚಿಂತನೆ - ಶ್ರೀ ಬಿ.ಎಸ್.ಗುಂಡುರಾವ್

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡುರಾವ್‌ರವರು ಸೌಹಾರ್ದ ಸಹಕಾರಿಗಳಲ್ಲಿ ಸದಸ್ಯರ ಕನಿಷ್ಠ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಅರ್ಹ ಸದಸ್ಯರ ಪಟ್ಟಿ ಸಿದ್ಧಪಡಿಸುವಿಕೆಯ ವಿಷಯದಲ್ಲಿ ಕೆಲವು ಗೊಂದಲಗಳು ಸೃಷ್ಟಿಯಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇದರ ಪರಿಹಾರಕ್ಕೆ ಕ್ರಮವಿಡಲಾಗುವುದು ಎಂದು ತಿಳಿಸಿದರು.

## ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ - ಶ್ರೀ ಶಶಿಧರ

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಹಕಾರಿಗಳ ಉಪನಿಬಂಧಕರಾದ ಶ್ರೀ ಶಶಿಧರರವರು ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಉತ್ತಮ ಚಟುವಟಿಕೆಗಳನ್ನು ಮಾಧ್ಯಮದವರಿಗೆ ತಿಳಿಸಿ ಇಲ್ಲವಾದರೆ ಎಲ್ಲೋ ನಡೆದ ಒಂದು ಘಟನೆಯನ್ನೇ ಪದೇ ಪದೇ ಬಿಂಬಿಸಿ ಸಹಕಾರ ಕ್ಷೇತ್ರದ ಬಗ್ಗೆ ಜನರಲ್ಲಿ ಆಸಕ್ತಿ ಕಡಿಮೆಯಾಗುವ ಹಾಗೇ ಮಾಡುತ್ತಾರೆ. ವಿಶೇಷವಾಗಿ ಸೌಹಾರ್ದ ಸಹಕಾರಿಗಳು ಚುನಾವಣೆ ಪ್ರಕ್ರಿಯೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹೊಂದಿರುವುದು ಅವಶ್ಯಕ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಬೆಂಗಳೂರು ವಿಭಾಗೀಯ ಅಧಿಕಾರಿ ಶ್ರೀ ನಾರಾಯಣ ಹೆಗಡೆಯವರು ಸ್ವಾಗತ ಕೋರಿದರು. ಶ್ರೀ ವಿ.ಜೆ.ಕಾರಕೂನರವರು ಪ್ರಾಸ್ತಾವಿಕ ನುಡಿಗಳನ್ನು ತಿಳಿಸಿದರು. ಕೊನೆಯಲ್ಲಿ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ವಂದಿಸಿದರು. ತರಬೇತಿಯಲ್ಲಿ 24 ಸೌಹಾರ್ದ ಸಹಕಾರಿಗಳಿಂದ 45 ಪ್ರತಿನಿಧಿಗಳು ಭಾಗವಹಿಸಿದ್ದರು. ತರಬೇತಿ ಅವಧಿಯಲ್ಲಿ ಡಾ.ಎಸ್.ಎ.ಸಿದ್ಧಾಂತಿ, ಶ್ರೀ ಹೆಚ್.ಎಸ್.ನಾಗರಾಜಯ್ಯ, ಶ್ರೀ ಭಾಸ್ಕರ ಹೆಗಡೆ ಕಾಗೇರಿ ಮತ್ತು ಡಾ.ನಂದೀಶ ಹಿರೇಮಠರವರುಗಳು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.